ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ಪಾವಗಡ ನ್ಯಾಯಾಲಯ

ಓ.ಎಸ್. ಸಂಖ್ಯೆ**21/2017**

ದಿನಾಂಕ **04.12.2025** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಿ.ಡಬ್ಲ್ಯೂ-1

ಮುಂದುವರೆದ ಪಾಟೀ ಸವಾಲುಃ **1** ಮತ್ತು **3** ನೇ ಪ್ರತಿವಾದಿಗಳ ಪರ ಶ್ರೀ.ಎನ್.ಎನ್.ಆರ್ ವಕೀಲರಿಂದಃ

3. ಸಾಲಂಕಿ ವೆಂಕಟರಾಮಯ್ಯ ನನ್ನ ತಾಯಿಯ ತಂದೆ. ದಿ.25.03.1987 ರಲ್ಲಿ ನನ್ನ ತಾತ ನನ್ನ ತಾಯಿಗೆ ದಾವಾ ಆಸ್ತಿಯನ್ನು ದಾನಪತ್ರದ ಮೂಲಕ ಕೊಟ್ಟಿದ್ದಾರೆ ಎಂದರೆ ಸುಳ್ಳು ದಾನಪತ್ರದಲ್ಲಿ ಹರಿಶಿನ ಕುಂಕುಮಕ್ಕಾಗಿ ಆಸ್ತಿಯನ್ನು ದಾನ ಮಾಡುತ್ತಿದ್ದೇನೆ ಎಂದು ಬರೆಯಲಾಗಿದೆ ಎಂದರೆ ಸುಳ್ಳು. ದಾನಪತ್ರದ ಮೂಲಕ ಬಂದ ಆಸ್ತಿಯ ಕಂದಾಯ ದಾಖಲೆಗಳು ನನ್ನ ತಾಯಿಯ ಹೆಸರಿಗೆ ಬಂತು ಎಂದರೆ ಸರಿ. ದಿ.19.09.2016 ರಲ್ಲಿ ನನ್ನ ತಾಯಿ ನನ್ನ ತಮ್ಮ 3 ನೇ ಪ್ರತಿವಾದಿಗೆ ದಾನಪತ್ರ ಮಾಡಿಕೊಟ್ಟಿದ್ದಾರೆ ಎಂದರೆ ಸರಿ ದಾನಪತ್ರದಂತೆ ನನ್ನ ತಮ್ಮನ ಹೆಸರಿಗೆ ಕಂದಾಯ ದಾಖಲೆಗಳು ಬಂದಿವೆ ಎಂದರೆ ಸರಿ ದಾವಾ ಸ್ವತ್ತಿನ ಸ್ವಾಧೀನದಲ್ಲಿ ನನ್ನ ತಮ್ಮ 3 ನೇ ಪ್ರತಿವಾದಿ ಇದ್ದಾರೆ ಎಂದರೆ ಸರಿ. ನಾನು ಸುಳ್ಳು ದಾವೆಯನ್ನು ಸೃಷ್ಟಿ ಮಾಡಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನನಗೆ ಆಸ್ತಿಯಲ್ಲಿ ಭಾಗ ಇಲ್ಲದಿದ್ದರೂ ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಂದೆ ಯಾವುದೇ ಆಸ್ತಿಯನ್ನು ಕೊಂಡುಕೊಂಡಿಲ್ಲ, ನಾನು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ . ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ. ಎಫ್. ಸಿ.,
ಪಾವಗಡ